ಓ ಎಸ್ ನಂಃ 244/2024
**ಪಿ.ಡಬ್ಲ್ಯೂ**: 01

**ದಿನಾಂಕಃ 05.08.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು**

ಮುಖ್ಯವಿಚಾರಣೆ: ಶ್ರೀ. ಕೆ.ಎನ್.ಎಸ್. ವಾದಿ ಪರ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆಸಿರುವ ಅಂಶಗಳು ಸರಿ ಹಾಗೂ ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದಾಗಿರುತ್ತದೆ.

2024-25 ನೇ ಸಾಲಿನ ಮಠದಜೋಗಿಹಳ್ಳಿ ಗ್ರಾಮದ ಸ.ನಂ. 66 ರ ಗಣಕೀಕೃತ ಪಹಣಿಯನ್ನು ನಿಪಿ-1 ಎಂದು, ದಿ: 10.11.2022 ರ ನೊಂದಾಯಿತ ಜಮೀನು ಮಾರಾಟದ ಒಪ್ಪಿಗೆ ಪತ್ರವನ್ನು ನಿಪಿ-2 ಎಂದು, 2021-22 ನೇ ಸಾಲಿನ ಮಠದಜೋಗಿಹಳ್ಳಿ ಗ್ರಾಮದ ಸ.ನಂ. 66 ರ ಗಣಕೀಕೃತ ಪಹಣಿಯನ್ನು ನಿಪಿ-3 ಎಂದು, ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ನಿಪಿ-4 ಎಂದು, 2 ರಸೀದಿ ಪಟ್ಟಾಗಳನ್ನು ನಿಪಿ-5 ಮತ್ತು 6 ಎಂದು, ಕಂದಾಯ ರಸೀದಿಯನ್ನು ನಿಪಿ-7 ಎಂದು ಗುರುತಿಸಲಾಯಿತು.

ಆದ್ದರಿಂದ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

**(ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದೇ ಇರುವ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಸಿವಿಲ್ ಮತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಮೊಳಕಾಲ್ಮೂರು.